**2. ಹಾಸನ ನಗರದಲ್ಲಿ ಮುನಿಸಿಪಾಲಿಟಿಯವರು ರೋಜ್‌ಗಾರ್ ಯೋಜನೆ ಅಡಿಯಲ್ಲಿ ಕಟ್ಟಿಸಿರುವ ಮಳಿಗೆಗಳನ್ನು ಬಾಡಿಗೆಗೆ ಕೊಡುವ ವಿಚಾರ**

ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ) : ಮಾನ್ಯ ಅಧ್ಯಕ್ಷರೇ, ಹಾಸನ ಮುನಿಸಿಪಾಲಿಟಿಯವರು ರೋಜ್‌ಗಾರ್ ಯೋಜನೆಯಿಂದ ಹಾಸನದ ಹಳೇ ಬಸ್ ಸ್ಟ್ಯಾಂಡ್‌ನಲ್ಲಿ ಮಳಿಗೆಗಳನ್ನು ಕಟ್ಟಿಸುತ್ತಿದ್ದಾರೆ. ಈ ಮಳಿಗೆಗಳನ್ನು ಸ್ಥಳೀಯ ಪೇಪರುಗಳಲ್ಲಿ ಜಾಹೀರಾತು ಕೊಟ್ಟು ಟೆಂಡರ್ ಮುಖಾಂತರ ಬಾಡಿಗೆಗೆ ಕೊಟ್ಟರೆ ಹೆಚ್ಚು ಈ ವಿಚಾರದಲ್ಲಿ ನಿಯಮಾವಳಿಯಂತೆ ಅಂಗಡಿಗಳನ್ನು ಸ್ಥಳೀಯ ಪೇಪರ್‌ಗಳಲ್ಲಿ ಟೆಂಡರ್ ಪ್ರಕಟಿಸಿ ಹೆಚ್ಚು ಬಿಡ್‌ದಾರರಿಗೆ ಅಂಗಡಿಗಳನ್ನು ಬಾಡಿಗೆಗೆ ಕೊಡುವಂತೆ ಹಾಸನ ಮುನಿಸಿಪಾಲಿಟಿಯವರಿಗೆ ಆದೇಶ ಕೊಡುವಂತೆ ಮಾನ್ಯ ನಗರಾಭಿವೃದ್ಧಿ ಸಚಿವರ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಬಸವರಾಜ್ ಪಾಟೀಲ್ (ಪಶುಸಂಗೋಪನಾ ಸಚಿವರು) : ಮಾನ್ಯ ಅಧ್ಯಕ್ಷರೇ, ತಮ್ಮ ಅನುಮತಿಯನ್ನು ಪಡೆದು ಮಾನ್ಯ ನಗರಾಭಿವೃದ್ಧಿ ಸಚಿವರ ಪರವಾಗಿ ಈ ಕೆಳಕಂಡ ಹೇಳಿಕೆಯನ್ನು ನೀಡುತ್ತೇನೆ.

ನೆಹರೂ ರೋಜ್‌ಗಾರ್ ಯೋಜನೆಯಡಿಯಲ್ಲಿ ಹಾಸನ ನಗರಸಭೆಯು 18,10,500 ರೂಪಾಯಿಗಳ ವೆಚ್ಚದಲ್ಲಿ 18 ಅಂಗಡಿಗಳನ್ನು ನಿರ್ಮಿಸುವ ಕಾಮಗಾರಿಯನ್ನು ಕೈಗೆತ್ತಿಕೊಂಡಿದೆ. ಈ ಕಟ್ಟಡವು ನಿರ್ಮಾಣದ ಹಂತದಲ್ಲಿದ್ದು ಪೂರ್ಣಗೊಳ್ಳಲು ಇನ್ನೂ ಮೂರು ತಿಂಗಳ ಕಾಲಾವಕಾಶ ಬೇಕಾಗಿದೆ. ಈ ಕಟ್ಟಡವು ಪೂರ್ಣಗೊಂಡನಂತರ ಹಾಸನ ನಗರಸಭೆಯು ಈ ಅಂಗಡಿಗಳನ್ನು ಹಂಚಿಕೆ ಮಾಡುವ ಕಾರ್ಯವನ್ನು ಕೈಗೆತ್ತಿಕೊಳ್ಳಲಿದೆ.

ಶ್ರೀ ಕೆ.ಹೆಚ್. ಹನುಮೇಗೌಡ : ನಾನು ಕೇಳಿದ್ದು ಟೆಂಡರ್ ಕರೆದು ಕೊಡಿರಿ ಎಂದು ಬಾಡಿಗೆಗೆ ಕೊಡುವುದು ನನಗೂ ಗೊತ್ತು.

ಉಪಾಧ್ಯಕ್ಷರು ; ಇದರ ಮೇಲೆ ತಾವು ಉಪ ಪ್ರಶ್ನೆ ಹಾಕುವಹಾಗೆ ಇಲ್ಲ. ಇದು ಒಂದು ಸ್ಟೇಟ್‌ಮೆಂಟ್ ಆಫ್ಟ್.

**3. ಸೇಡಂ ಕ್ಷೇತ್ರದಲ್ಲಿ ರಸ್ತೆ ಕಾಮಗಾರಿಗಳನ್ನು ಪೂರ್ಣಗೊಳಿಸುವುದು.**

ಶ್ರೀ.ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಅಧ್ಯಕ್ಷರೇ, ಶಾಸಕರ ಅಭಿಪ್ರಾಯದ ಮೇರೆಗೆ 1989-91ನೇ ಸಾಲಿನಲ್ಲಿ 12 ಲಕ್ಷ ರೂಪಾಯಿಗಳ ಕಾಮಗಾರಿಗಳನ್ನು ಲೋಕೋಪಯೋಗಿ ಇಲಾಖೆಯವರು ತೆಗೆದುಕೊಂಡು ಟೆಂಡರ್ ಸಹ ಕರೆಯಲಾಗಿತ್ತು. ಆದರೆ ನನ್ನ ಕ್ಷೇತ್ರ ಸೇಡಂನಲ್ಲಿ, ಮುಧೋಳ್ ಅಪ್ರೋಚ್ ರೋಡ್ ಪೋಲೀಸ್ ಸ್ಟೇಷನ್‌ವರೆಗೆ ಮಳಖೇಡ್-ಚಿತಾಪುರ ರೋಡ್, ರಾಜಶ್ರೀ-ಕ್ರಾಸ್‌ವರೆಗೆ, ಹಾಗೂ ಸೇಡಂ ಕ್ಷೇತ್ರದ ಚಿತಾಪುರ ತಾಲೋಕಿನ ಸಾತನೂರು-ದಂದ್ರಕ್ಕಿ ರೋಡಿನ ಮೇಲೆ ಮತ್ತು ಸಾತನೂರ್-ಲಾಡ್ಲಪುರ್ ರೋಡಿನ ಮೇಲೆ ಹಳ್ಳಿಳ್ಳಿವರೆಗೆ ಕಾಮಗಾರಿಗಳನ್ನು ತೆಗೆದುಕೊಂಡು ಹಣ ಇಲ್ಲದ್ದಕ್ಕಾಗಿ ಗುತ್ತೇದಾರರು ಕೇಲಸ ಮಾಡಿಲ್ಲವೆಂದು ಹೇಳುತ್ತಿರುವುದು ನಿಜವೇ? ಎರಡು ವರ್ಷಗಳಾದರೂ ಈ ಕಾಮಗಾರಿಗಳನ್ನು ಪೂರ್ತಿ ಮಾಡಲಿಲ್ಲವೇಕೆ? ಈ ಕಾಮಗಾರಿಗಳನ್ನು ಪೂರ್ತಿಗೊಳಿಸಲು ಸರಕಾರದ ಗಮನವನ್ನು ಸೆಳೆಯುತ್ತೇನೆ.

ಶ್ರೀ ಜಿ.ಹೆಚ್. ಅಶ್ವತ್ಥರೆಡ್ಡಿ (ಲೋಕೋಪಯೋಗಿ ಸಚಿವರು) : ಮಾನ್ಯ ಅಧ್ಯಕ್ಷರೇ, 1990-91ನೇ ಸಾಲಿನಲ್ಲಿ ರಾಜ್ಯದ ಪ್ರತಿ ವಿಧಾನ ಸಭಾ ಮತ ಕ್ಷೇತ್ರದಲ್ಲಿ, 12 ಲಕ್ಷ ರೂಪಾಯಿಗಳ ಅಂದಾಜಿನಲ್ಲಿ ಲೋಕೋಪಯೋಗಿ ಇಲಾಖೆ ವ್ಯಾಪ್ತಿಯ ರಸ್ತೆಗಳ ಅಭಿವೃದ್ಧಿ ಕಾಮಗಾರಿಗಳನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಡಿ ತೆಗೆದುಕೊಂಡಿದ್ದ ಕಾಮಗಾರಿಗಳನ್ನು 1991-92ನೇ ಸಾಲಿನಲ್ಲಿಯೂ ಮುಂದುವರಿಸಲಾಯಿತು. ಈ ಸಾಲಿಗೆ ಇದಕ್ಕೆ ಹೆಚ್ಚುವರಿಯಾಗಿ ಒಟ್ಟು 10 ಕೋಟಿ ರೂಪಾಯಿಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಆದ್ದರಿಂದ ಈ ಕಾರ್ಯಕ್ರಮಕ್ಕೆ ಹಣದ ಅಡಚಣೆ ಆಗುವುದಿಲ್ಲ.

ಈ ಕಾರ್ಯಕ್ರಮದಡಿಯಲ್ಲಿ ಸೇಡಂ ಮತ ಕ್ಷೇತ್ರದಲ್ಲಿಯೂ ಸಹ ಕೆಲವು ಕಾಮಗಾರಿಗಳನ್ನು ತೆಗೆದುಕೊಂಡಿದ್ದು, ಗುತ್ತಿಗೆ ಆಧಾರದ ಮೇಲೆ ಗುತ್ತಿಗೆದಾರರಿಗೆ ವಹಿಸಿಕೊಟ್ಟಿದೆ. ಗುತ್ತಿಗೆದಾರರು ಕೆಲವು ರಸ್ತೆಗಳ ಮೇಲೆ ಸ್ವಲ್ಪ ಜಲ್ಲಿ ಸಂಗ್ರಹಣೆ ಮಾಡಿದ್ದು ಕಾಮಗಾರಿಗಳನ್ನು ನಿಧಾನ ಮಾಡಿದ್ದಾರೆ. ಇವರಿಗೆ ನೋಟೀಸ್‌ಗಳನ್ನು ನೀಡಿದ್ದು ಕಾಮಗಾರಿಗಳನ್ನು ಶೀಘ್ರ ಮುಗಿಸುವಂತೆ ತಿಳುವಳಿಕೆ ನೀಡಲಾಗಿದೆ.

ಈ ಕಾಮಗಾರಿಗಳನ್ನು ಶೀಘ್ರದಲ್ಲಿ ಮುಗಿಸಲು ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು.

**4. ಪುತ್ತೂರು ತಾಲ್ಲೂಕಿನಲ್ಲಿ ಏತ ನೀರಾವರಿ ಯೋಜನೆಯನ್ನು ಜಾರಿಗೊಳಿಸುವುದು.**

ಶ್ರೀ ಕೆ. ಕುಶಾಲ (ಸುಳ್ಯ) : ಮಾನ್ಯ ಉಪಾಧ್ಯಕ್ಷಣಿಯವರೆ, ಸುಳ್ಯ ವಿಧಾನ ಸಭಾ ಕ್ಷೇತ್ರದ, ಪುತ್ತೂರು ತಾಲ್ಲೂಕಿನ ಕಸಬ ಕಂದಾ ಹೋಬಳಿಯ ಬಿಳಿನೆಲೆ ಕೈತುಂಬ ಎಂಬಲ್ಲಿ ನೀರಾವರಿ ಇಲಾಖೆಯಿಂದ ಬಂಟ್ರ-ಕೈಕಂಬ, ಬಿಳಿನೆಲೆ, ಆತೂರು, ಕೋಡಿಂಬಳ್ ಎಂಬ ಕಂದಾಯ ಗ್ರಾಮಗಳ ಸುಮಾರು 250 ಕುಟುಂಬಗಳ ರೈತರಿಗೆ 2000 ಎಕರೆ ಜಮೀನು ಕೃಷಿ, ನೀರಾವರಿಗೆ ಅನುಕೂಲವಾಗುವಂತಹ ಕೃಷಿ ನೀರಾವರಿ ಯೋಜನೆ ಕೈಕೊಳ್ಳುವಂತೆ, 1989-90ನೇ ಸಾಲಿನಲ್ಲಿ ಪ್ರಸ್ತಾವನೆ ನಿಲ್ಲಿಸಲಾಗಿತ್ತು.

ಆದರೆ, ಈ ನೀರಾವರಿ ಯೋಜನೆ, ಮಂಜೂರಾತಿಯು ಈತನಕ ಆಗಿರುವುದಿಲ್ಲ.

ಆದುದರಿಂದ ಸದರಿ ಯೋಜನೆ ಯಾವ ಹಂತದಲ್ಲಿದೆ? ಮತ್ತು ಸರಕಾರ ಈ ವರ್ಷ ಮಂಜೂರಾತಿ ನೀಡಲು ಏನು ಕ್ರಮ ಕೈಗೊಳ್ಳಲಿದೆ ಎಂದು ತಿಳಿಯಬಯಸುತ್ತೇನೆ.

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು) : ಪುತ್ತೂರು ತಾಲ್ಲೂಕಿನ ಕಡಬಾ, ಕಡಿವೈಲು ಮತ್ತು ಕುಟ್ಟಿಪಾಡಿ ಹತ್ತಿರ ಏತ ನೀರಾವರಿ ಯೋಜನೆಗೆ 121 ಲಕ್ಷ ರೂಪಾಯಿಗಳ ಪ್ರಾಥಮಿಕ ತನಿಖಾ ವರದಿಯನ್ನು ತಯಾರು ಮಾಡಲಾಗಿದೆ. ಈ ಏತ ನೀರಾವರಿ ಯೋಜನೆಯಿಂದ 524 ಹೆಕ್ಟೇರ್ ಆರೆ ನೀರಾವರಿ ಬೆಳೆಗಳನ್ನು ಖಾರೀಫ್ ಮತ್ತು ರಾಬಿ ಅವಧಿಯಲ್ಲಿ ಬೆಳೆಯಲು ಉದ್ದೇಶಿಸಲಾಗಿದೆ. ನೀರಿನ ದರ ಪ್ರತಿ ಹೆಕ್ಟೇರ್ ಪ್ರತಿ ಬೆಳೆಗೆ 3064 ರೂಪಾಯಿಗಳು ಆಗುತ್ತಿದ್ದು, ಇದು ಆರ್ಥಿಕವಾಗಿ ಶಕ್ಯವೆಂದು ಕಂಡು ಬರುತ್ತದೆ. ದಿನಾಂಕ 30-01-92ರಲ್ಲಿ ಈ ಯೋಜನೆಗೆ ಕುಮಾರಧಾರ ನದಿಯಿಂದ 20.50 ಕ್ಯೂಸೆಕ್ಸ್ ನೀರು ಎತ್ತುವ ಸರ್ಕಾರ ಪರವಾನಗಿ ನೀಡಲಾಗಿದೆ. ಕಾಂಟೂರು ಹಾಗೂ ಕಮಾಂಡ್ ಏರಿಯಾ ಸರ್ವೆಗಳನ್ನು ತೆಗೆದುಕೊಂಡು ಯೋಜನಾ ವರದಿಯನ್ನು ತಯಾರಿಸಿ ಆರ್ಥಿಕ ನೆರವು ಪಡೆಯಲು ಆದಷ್ಟು ಶೀಘ್ರವಾಗಿ ನಬಾರ್ಡ್‌ಗೆ ಕಳುಹಿಸಲಾಗುವುದು.